ಹಾಗೂ ಮಾನ್ಯ ಮುಖ್ಯಮಂತ್ರಿಗಳು ಈ ವಿಷಯದ ಬಗ್ಗೆ ಹೇಳಿಕೆ ಕೊಟ್ಟಿದ್ದು ಯಾವ ಮಟ್ಟದಲ್ಲಿ ಇದೆ ? ಕುಡಿಯುವ ನೀರಿನ ತೊಂದರೆ ಹುಬ್ಬಳ್ಳಿ–ಧಾರವಾಡ ನಗರಕ್ಕೆ ಬಹಳ ತೊಂದರೆಯಲ್ಲಿದೆ ಕಾರಣ ಗೋವಾ ಸರ್ಕಾರದಿಂದ ಒಪ್ಪಿಗೆ ಪಡೆದು ಮಹಾದಾಯಿ ನದಿ ನೀರು ಸಮುದ್ರದ ಪಾಲಾಗುವುದನ್ನು ತಪ್ಪಿಸಿ ಬೇಗನೆ ಮಲಪ್ರಭಾ ನದಿಗೆ ಮಹಾದಾಯಿ ನದಿಯನ್ನು ಜೋಡಣೆ ಮಾಡಿದಲ್ಲಿ ಧಾರವಾಡ ಜಿಲ್ಲೆಯ ರೈತರಿಗೂ ಹಂತ್ತು ಸಾರ್ವಜನಿಕರಿಗೂ ಅನುಕೂಲವಾಗುವದಿದ್ದು ಮಾನ್ಯ ಮುಖ್ಯಮಂತ್ರಿಗಳಂ ದಯವಿಟ್ಟು ಬೇಗನೆ ಈ ಯೋಜನೆಯನ್ನು ಮಂಜೂರು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಬಂದರು ಹಾಗೂ ವಿಮಾನಯಾನ ಮಂತ್ರಿಗಳ ಪರವಾಗಿ).—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಏನು ಈ ವಿಚಾರವನ್ನು ಪ್ರಸ್ತಾಪಿಸಿದ್ದಾರೆ, ಇದು ಸರ್ಕಾರದ ಗಮನದಲ್ಲಿದೆ. ಈ ವಿಚಾರವನ್ನು ಬಂದರು, ವಿಮಾನಯಾನ ಹಾಗೂ ವಸತಿ ಸಚಿವರ ಗಮನಕ್ಕೆ ಈ ವಿಚಾರವನ್ನು ತರುತ್ತೇನೆ.

## ೨. ಮಧುವನಳ್ಳಿಯ ಲಕ್ಷ್ಮಮ್ಮ ಆನೆಯ ತುಳಿತಕ್ಕೆ ಸಿಕ್ಕಿ ಸಾವನ್ನಪ್ಪಿರುವ ಬಗ್ಗೆ

ಶ್ರೀ ಜಿ. ರಾಜುಗೌಡ (ಹನೂರು).—ಮಾನ್ಯ ಅಧ್ಯಕ್ಷರೇ, ಮೈಸೂರು ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ಮಧುವನಹಳ್ಳಿಯ ಲಕ್ಷ್ಮಮ್ಮ ಎಂಬಾಕೆ ಕಾಡಿಗೆ ಒಣಸೌದೆ ಆಯ್ದು ತರಲು ಹೋಗಿದ್ದಾಗ ಆಕೆಯು ಆನೆಯ ತುಳಿತಕ್ಕೆ ಸಿಕ್ಕಿ ೨೬–೧೦ ರಂದು ಸಾವನ್ನು ಅಪ್ಪಿದ್ದರೂ ಇದುವರೆಗೂ ಸರ್ಕಾರದಿಂದ ಪರಿಹಾರ ದೊರೆಯದಿರುವ ಬಗ್ಗೆ ಮಾನ್ಯ ಅರಣ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಕೃಷಿ, ತೋಟಗಾರಿಕೆ, ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳ ಪರವಾಗಿ).—ಸನ್ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ಅರಣ್ಯ ಮಂತ್ರಿಗಳವರ ಗಮನಕ್ಕೆ ತರುತ್ತೇನೆ. ಮತ್ತು ಅವರಿಗೆ ಏನು ಪರಿಹಾರವನ್ನು ಕೊಡಿಸಬೇಕೋ ಅದನ್ನು ಆದಷ್ಟು ಜಾಗ್ರತೆ ಸರ್ಕಾರದಿಂದ ಕೊಡಿಸ-ತ್ತೇವೆ.

## ೩. ಬೈಂದೂರು ಪುರಸಭೆಯನ್ನು ಮಂಡಲ ಪಂಚಾಯತಿ ಆಗಿ ಪರಿವರ್ತಿಸುವುದು.

ಶ್ರೀ ಜಿ. ಎಸ್. ಆಚಾರ್.—ಸನ್ಮಾನ್ಯ ಅಧ್ಯಕ್ಷರೇ, ಬೈಂದೂರು ಪುರಸಭೆಯನ್ನು ಮಂಡಲ ಪಂಚಾಯಿತಿ ಆಗಿ ಪರಿವರ್ತಿಸುವುದು. ಪಡುಗಡಲ ತಡಿಯಿಂದ ಪಶ್ಚಿಮ ಘಟ್ಟದ ಬುಡದವರೆಗೂ ಹರಡಿರುವ ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಪುರಸಭೆಯಲ್ಲಿ ಮುಕ್ಕಾಲು ಭಾಗ ಬೆಟ್ಟ, ಗುಡ್ಡ, ಕಾಡುಗಳಿಂದ ಆವೃತವಾಗಿದೆ. ಹರಿಜನ–ಗಿರಿಜನರು ಅಲ್ಪಸಂಖ್ಯಾತರು ಇತರ ಬಡವರೇ ಹೆಚ್ಚಾಗಿರುವ ಈ ಪುರಸಭೆಯ ಜನಸಂಖ್ಯೆ ಹತ್ತು ಸಾವಿರಕ್ಕಿಂತ ಕೆಲವೇ ನೂರು ಅಧಿಕ ಎಂಬ ಕಾರಣದಿಂದಾಗಿ ಮಂಡಲ ಪಂಚಾಯತ್ ಆಗಿ ಪರಿವರ್ತಿತವಾಗಿಲ್ಲ. ಮಂಡಲ ಪಂಚಾಯತ್ ರಚಿಸಲು ೧೨,೫೦೦ ಜನಸಂಖ್ಯೆ ಎಂಬ ವಿಧಿ ಇದ್ದರೂ, ಪರಿವರ್ತನೆಗೆ ಹತ್ತು ಸಾವಿರದ ವಿಂತಿ ವಿಧಿಸಿದ್ದು ಸಹಾ ಸರಿಯಲ್ಲ. ವಿಶೇಷ ಘಟಕ ಯೋಜನೆ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಜಿಲ್ಲಾ ಪರಿಷತ್ತಿನ ಮೂಲಕ ದೊರಕುವ ಯಾವುದೇ ಸವಲತ್ತುಗಳು ಸಿಗದ ಈ ಪುರಸಭೆ, ಸ್ವಂತ ಆದಾಯವೂ ಇಲ್ಲದೆ. ಏನೇನೂ ಪ್ರಗತಿ ಆಗದೆ ಸೊರಗುತ್ತಿದೆ. ಆದಂದರಿಂದ ಬೈಂದೂರು ಪುರಸಭೆಯನ್ನು ಮಂಡಲ ಪಂಚಾಯತ್ ಆಗಿ ಪರಿವರ್ತಿಸಬೇಕು. ಮುಂದಿನ ಪುರಸಭಾ ಚುನಾವಣೆ ಆಗುವ ಮೊದಲೇ ಮಂಡಲ ಪಂಚಾಯತ್ ಆಗಿ ಪರಿವರ್ತಿಸಿ ಮಂಡಲ ಪಂಚಾಯಿತಿಗೆ ಚುನಾವಣೆ ನಡೆಸಬೇಕು ಎಂದು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ).—ಸನ್ಮಾನ್ಯ ಅಧ್ಯಕ್ಷರೇ, ಜಿಲ್ಲಾ ಪರಿಷತ್ತು ಕಾಯ್ದೆ ಪ್ರಕಾರ ಪುರಸಭೆಗಳನ್ನು ಮಂಡಲ ಪಂಚಾಯಿತಿಗಳನ್ನಾಗಿ ಪರಿವರ್ತಿಸಬಹುದಾಗಿದೆ. ಇದರಲ್ಲಿ ಒಂದು ಜನಸಂಖ್ಯೆಯ ನಿರ್ಬಂಧ ಇದೆ. ಅಂದರೆ ಸರ್ಕಾರ ತೀರ್ಮಾನಿಸಿದಂತೆ ಹತ್ತು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಪುರಸಭೆಗಳನ್ನು ಮಾತ್ರ ಮಂಡಲಪಂಚಾಯಿತಿಗಳನ್ನಾಗಿ ಮಾರ್ಪಡಿಸಬಹುದಾಗಿದೆ. ೨೧ನೇ ಜನಗಣತಿ ಪ್ರಕಾರ ಬೈಂದೂರಿನ ಜನಸಂಖ್ಯೆ ೧೦,೫೫೦ಕ್ಕೂ ಹೆಚ್ಚು ಇದೆ. ಆದುದರಿಂದಲೇ ಈ ಪುರಸಭೆಯನ್ನು ಮಂಡಲ ಪಂಚಾಯಿತಿಯನ್ನಾಗಿ ಪರಿವರ್ತಿಸಲಾಗುವುದಿಲ್ಲ. ಈಗಾಗಲೇ ಪರಿವರ್ತಿತ ಮಂಡಲ ಪಂಚಾಯಿತಿಗಳಲ್ಲಿ ಸಿಬ್ಬಂದಿ ಮತ್ತು ಆರ್ಥಿಕ ವಂಗಡ್ಡಟ್ಟನ್ನು ಎದುರಿಸುತ್ತಿರುವ ಕಾರಣ ಇನ್ನು ಹೆಚ್ಚಿನ ಪುರಸಭೆಗಳನ್ನು ಮಂಡಲಪಂಚಾಯಿತಿಗಳನ್ನಾಗಿ ಪರಿವರ್ತಿಸುವುದು ಸಮಂಜಸ ಇರುವುದಿಲ್ಲ ಮತ್ತು ಸರ್ಕಾರ ಕೂಡಾ